ಮೂಲ ದಾವೆ ನಂ.93/2019
ಡಿ.ಡಬ್ಲ್ಯೂ.1

<u>ದಿನಾಂಕಃ 31.03.2021</u>
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.
<u>ಮುಂದುವರೆದ ಪಾಟೀ ಸವಾಲು ವಾದಿಯ ಪರವಾಗಿ ಶ್ರೀ. ಎಮ್.ಆರ್.ಬಿ ವಕೀಲರಿಂದ ಃ</u>

7. ನಾನು 2 ನೇ ಪ್ರತಿವಾದಿಯ ಹತ್ತಿರ ಕ್ರಯ ಪತ್ರ ಮಾಡಿಸಿಕೊಂಡ ಸಂದರ್ಭದಲ್ಲಿ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ಕೂಡಿಯೇ ಇದ್ದರು ಎಂದರೆ ಸರಿಯಲ್ಲ. ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ಬೇರೆಯಾಗಿರುವ ಬಗ್ಗೆ ನಾನು ಈ ಕೇಸಿನಲ್ಲಿ ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ. ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರು ಬೇರೆಯಾದ ಸಂದರ್ಬದಲ್ಲಿ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರಿಗೆ ಎಷ್ಟು ಎಷ್ಟು ಆಸ್ತಿಗಳು ಬಂತು ಎಂದು ನನಗೆ ಗೊತ್ತಿಲ್ಲ. ಸುಮಾರು 20 ರಿಂದ 25 ವರ್ಷಗಳ ಹಿಂದೆ ಶಿರವಾಳ ಗ್ರಾಮದಲ್ಲಿ ಒಂದು ಎಕರೆ ಹೊಲ ಅಂದಾಜು 10 ಲಕ್ಷ, 15 ಲಕ್ಷ, ಹಾಗೂ 20 ಲಕ್ಷ ರೂಪಾಯಿಗೆ ಮಾರಾಟ ಆಗಿರುತ್ತದೆ. ನಾನು 2 ನೇ ಪ್ರತಿವಾದಿಯಿಂದ ಜಮೀನನ್ನು ಖರೀದಿ ಮಾಡುವ ಸಂದರ್ಭದಲ್ಲಿ ಸದರಿ ಜಮೀನಿನ ಮೌಲ್ಯ ಎಷ್ಟು ಎಂದು ಉಪ-ನೋಂದಣಿ ಅಧಿಕಾರಿಯ ಕಛೇರಿಯಲ್ಲಿ ವಿಚಾರಿಸಿರುವುದಿಲ್ಲ. ನಾನು 2 ನೇ ಪ್ರತಿವಾದಿಯಿಂದ ಜಮೀನಿನನ್ನು ಖರೀದಿ ಮಾಡಿದ ಸಂದರ್ಭದಲ್ಲಿ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರಿಗೆ ಯಾವ ಯಾವ ಹೊಲಗಳು ಹೋಗಿವೆ ಎಂಬುವದರ ಬಗ್ಗೆ ವಿಚಾರಿಸಿರುತ್ತೇನೆ. ಆ ರೀತಿ ನಾನು ವಿಚಾರಿಸಿದಾಗ ವಾದಿಗೆ ಸರ್ವೆ ನಂ.161 ರಲ್ಲಿ 3 ಎಕರೆ ಜಮೀನು ಕೊಟ್ಟಿರುವ ಬಗ್ಗೆ ನನಗೆ ಗೊತ್ತಾಯಿತು.

8. ಭೀಮರಾಯ ಮತ್ತು ತಿಪ್ಪಣ್ಣನವರ ಒಟ್ಟು ಎಷ್ಟು ಜಮೀನುಗಳು ಇವೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಭೀಮರಾಯ ಮತ್ತು ತಿಪ್ಪಣ್ಣನವರ ತಂದೆಯಾದ ಲಚ್ಚಮಣ್ಣ ರವರ ಹೆಸರಿನಲ್ಲಿ ಯಾವ ಯಾವ ಸರ್ವೆ ನಂಬರನಲ್ಲಿ ಎಷ್ಟು ಎಷ್ಟು ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ನಾನು 2 ನೇ ಪ್ರತಿವಾದಿಯಿಂದ ಸರ್ವೆ ನಂ. 177/1 ಮತ್ತು 178/1 ರಲ್ಲಿರುವ ಜಮೀನು ಖರಿದಿ ಮಾಡಿರುತ್ತೇನೆ. ಎಲ್ಲಾ ದಾವಾ ಆಸ್ತಿಗಳು ಇವತ್ತಿನ ವರೆಗೂ ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಕಬ್ಜಾದಲ್ಲಿದೆ ಎಂದರೆ ಸರಿಯಲ್ಲ. ವಾದಿ, 1 ನೇ ಪ್ರತಿವಾದಿ, ಹಾಗೂ 3 ಮತ್ತು

4ನೇ ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು 2ನೇ ಪ್ರತಿವಾದಿ ಸೇರಿಕೊಂಡು ಸುಳ್ಳು ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಖರೀದಿ ಮಾಡಿರುತ್ತೇನೆ ಎಂದು ಹೇಳಿರುವ ಆಸ್ತಿಗಳು ವಾದಿ ಮತ್ತು 1 ರಿಂದ 4ನೇ ಪ್ರತಿವಾದಿಯರ ಅವಿಭಕ್ತ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ನಾನು ಸುಳ್ಳು ಪ್ರತಿವಾದ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ನಮೂದು ಮಾಡಿರುವ ಹಣವನ್ನು ನಾನು 2ನೇ ಪ್ರತಿವಾದಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

3ನೇ ಪ್ರತಿವಾದಿಯ ವಕೀಲರು ಪಾಟೀ ಸವಾಲು ಇಲ್ಲಾ ಎಂದು ಹೇಳಿರುತ್ತಾರೆ.

1, 2 ಮತ್ತು 4ನೇ ಪ್ರತಿವಾದಿಯರು ಏಕಪಕ್ಷೀಯರಾಗಿರುತ್ತಾರೆ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.